**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 4/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 2**

**ದಿನಾಂಕಃ 28.07.2026** **ಸಿಡಬ್ಲ್ಯೂ 3**

| | |
|---|---|
| ಹೆಸರು | ಹುಚ್ಚಂಗಪ್ಪ |
| ತಂದೆಯ ಹೆಸರು | ನೀಲಪ್ಪ |
| ವಯಸ್ಸು | 41 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ದೂಳೆಹೊಳೆ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಹರಿಹರಕ್ಕೆ ಹೋಗಿ ಮರಳಿ ಬರುತ್ತಿರುವಾಗ ಪೋಲೀಸರು ಒಂದು ದಾಖಲೆಗೆ ಸಹಿ ಮಾಡಿಸಿರುತ್ತಾರೆ. ನನಗೆ ಅದರಲ್ಲಿ ಬರೆದಿರುವ ವಿಷಯ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಸಾಕ್ಷಿಯು ಕೃತ್ಯ ನಡೆದ ಸ್ಥಳದ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.3 ಎಂದು ಸಾಕ್ಷಿಯ ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗದ ಪೋಟೋ ನಿಪಿ.4 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ26.08.2022 ರಂದು ತಿಮ್ಮಾಪುರ ಗ್ರಾಮದ ನಾಮದೇವರ ಭತ್ತದ ಗದ್ದೆ ಮುಂದೆ ಬಳಸನೂರು ತಿಮ್ಮಾಪುರ ರಸ್ತೆಯಲ್ಲಿ ಚನ್ನಯ್ಯ ಮತ್ತು ನನ್ನನ್ನು ಗ್ರಾಮಾಂತರ ಪೋಲೀಸರು ಪಂಚನಾಮೆಗೆ ಕರೆಸಿರುತ್ತಾರೆ ಎಂದರೆ ಸರಿ. ಅಲ್ಲಿ ನಾಗರಾಜರವರು ಇದೇ ಸ್ಥಳದಲ್ಲಿ ದಿಃ24.08.2022 ರಂದು ಸಂಜೆ 4 ಗಂಟೆ ಸಮಯದಲ್ಲಿ ಕಾರು ಮತ್ತು ಮೋಟಾರ ಸೈಕಲ್ ಮಧ್ಯ ಅಪಘಾತವಾಗಿರುತ್ತದೆ. ಆ ಸ್ಥಳ ಇದೆ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಕೆ ಎಸ್ ಐ ವಕೀಲರಿಂದಃ

ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ, ಪೋಟೋ ತೆಗೆದು ಸಹಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜಿಎಂಎಫ್‌ಸಿ, ಹರಿಹರ.